# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.70/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16.2.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಿಗೆ ನ್ಯಾಯಾಲಯದ ಆದೇಶದಂತೆ, ಅವರ ಆಸ್ತಿಯಲ್ಲಿ ಕಂಪೌಂಡ್ ಕಟ್ಟಲು ಅವಕಾಶ ನೀಡಲು ಹಾಗೂ ಅವರಿಗೆ ರಕ್ಷಣೆ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಸಿ.ಲಕ್ಷ್ಮಯ್ಯ, ತಂದೆ ಚಿನ್ನಪ್ಪಯ್ಯ, ಲೊಟ್ಟೆಗೊಲ್ಲಹಳ್ಳಿಯ ನಿವಾಸಿ, ಬೆಂಗಳೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಎಂ.ಎನ್.ಲೋಹಿತ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಶಿವಕೋಟೆ ಗ್ರಾಮ ಪಂಚಾಯತಿ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಹಾಗೂ (2) ಶ್ರೀ ಎಸ್.ಲೂಯಿರಾಮ್ ರೆಡ್ಡಿ, ಆರಕ್ಷಕ ಉಪ ನಿರೀಕ್ಷಕರು, ರಾಜಾನಕುಂಟೆ ಪೋಲೀಸ್ ಠಾಣೆ, ದೊಡ್ಡಬಳ್ಳಾಪುರ ಗ್ರಾಮಾಂತರ ವೃತ್ತ, ಬೆಂಗಳೂರು, (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಮಾವಳ್ಳಿಪುರ ಗ್ರಾಮದ ಆಸ್ತಿ ನಂ.151 ಜಂಜರು ನಂ.120 ವಿ.75x80 ಅಡಿ ಆಸ್ತಿಯು ದೂರುದಾರರ ಮಾಲೀಕತ್ವದ ಸ್ವತ್ತಾಗಿದ್ದು, ಅವರ ಸ್ವಾಧೀನದಲ್ಲಿದೆ. ಆದರೆ 1ನೇ ಎದುರುದಾರರು ಹಾಗೂ ಕೆಲವು ಗ್ರಾಮಪಂಚಾಯತಿ ಸದಸ್ಯರು ಸೇರಿ ದೂರುದಾರರ ಆಸ್ತಿಯ ಸುತ್ತ ಕಂಪೌಂಡ್ ಗೋಡೆ ಕಟ್ಟಲು ತೊಂದರೆ ಕೊಡಲು ಪ್ರಾರಂಭಿಸಿದರು. ಆಗ ದೂರುದಾರರು ಒ.ಎಸ್.274/1996 ಅಂತ ದಿ.17.4.1996ರಂದು ಬೆಂಗಳೂರು ನ್ಯಾಯಾಲಯದಲ್ಲಿ ದಾಖಲಿಸಿ ಶಾಶ್ವತ ನಿರ್ಬಂಧಕಾಜ್ಞೆ ಡಿಕ್ರಿ ಪಡೆದುಕೊಂಡಿರುತ್ತಾರೆ. ಆನಂತರ 1ನೇ ಎದುರುದಾರರು ದಿ.25.2.1996ರಂದು

ಗ್ರಾಮಪಂಚಾಯತಿಯಲ್ಲಿ ಗೊತ್ತುವಳಿ ಮಾಡಿದ್ದು, ಅದನ್ನು ಪ್ರಶ್ನಿಸಿ ಉಚ್ಚ ನ್ಯಾಯಾಯದಲ್ಲಿ ರಿಟ್ ಅರ್ಜಿ ಸಂ.35272/1999 ಎಂದು ದಾಖಲಿಸಿ ಅದರಲ್ಲಿ ಸದರಿ ಗೊತ್ತುವಳಿಯನ್ನು ರದ್ದುಗೊಳಿಸಿರುತ್ತಾರೆ. ಒ.ಎಸ್.274/1996 ರ ಡಿಕ್ರಿಯ ಮೇಲೆ ಬಿ.ಡಿ.ಒ. ಯಲಹಂಕ ಅವರು ಆರ್.ಎ.144/2005 ಎಂದು ಮೇಲ್ಮನವಿ ಸಲ್ಲಿಸಿದ್ದು ದಿ.29.6.2009ರಂದು ವಜಾಗೊಂಡಿರುತ್ತದೆ. ಆನಂತರ 1ನೇ ಎದುರುದಾರರು ತಮ್ಮ ಅದಿಕಾರ ದುರುಪಯೋಗಪಡಿಸಿಕೊಂಡು, ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ದೂರುದಾರರು ತಮ್ಮ ಆಸ್ತಿಯ ಸುತ್ತ ಕಂಪೌಂಡ್ ಗೋಡೆ ಕಟ್ಟಲು ತಡೆಯೊಡ್ಡಿರುತ್ತಾರೆ. ಆಗ ದೂರುದಾರರು 2ನೇ ಎದುರುದಾರರಿಗೆ ದೂರು ದಾಖಲಿಸಿ ತನಗೆ ರಕ್ಷಣೆ ಒದಗಿಸಬೇಕೆಂದು ಕೇಳಿಕೊಂಡಾಗ 2ನೇ ಎದುರುದಾರರು ಸೂಕ್ತ ರಕ್ಷಣೆ ನೀಡದೆ 1ನೇ ಎದುರುದಾರರೊಂದಿಗೆ ಷಾಮೀಲಾಗಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪಂಚಾಯತಿ ಆಸ್ತಿ ರಿಜಿಸ್ಟರ್ ನಮೂನೆ 9 ರಲ್ಲಿ ಆಸ್ತಿ ನಂ.151ರ ಮಾಲೀಕರ ಹೆಸರನ್ನು ತಿದ್ದಿರುವುದು ಕಂಡುಬರುತ್ತದೆ. ಸ್ಥಳ ಪರಿಶೀಲಿಸಿದಾಗ 151ರ ಆಸ್ತಿಯ ಚೆಕ್ ಬಂದಿಯನ್ನೇ ಹೋಲುವ ಜಾಗದಲ್ಲಿ ಕಿರಿಯ ಪ್ರಾಥಮಿಕ ಶಾಲೆ ಇರುತ್ತದೆ. ಈ ಶಾಲೆಯು 1954ರಿಂದ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಶಾಲೆಯಿರುವ ಆಸ್ತಿ ನಂ.132/1 ಹಾಗೂ 151 ಇವು ಎರಡೂ ಚೆಕ್ ಬಂದಿಗಳು ಒಂದೇ ಆಗಿರುವುದರಿಂದ ಇಬ್ಬರಲ್ಲಿ ಒಬ್ಬರು ಮಾತ್ರ ನೈಜ ಮಾಲೀಕರಾಗಲು ಸಾದ್ಯವಿರುತ್ತದೆ. ಸರ್ಕಾರಿ ಶಾಲೆ ಬಹಳ ದಿವಸಗಳಿಂದ ಅಸ್ತತ್ವದಲ್ಲಿರುವುದರಿಂದ ಸದರಿ ಜಾಗದ ಪೂರ್ಣ ಅಧಿಭೋಗದಾರರು ಶಾಲೆಯವರು ಎಂದು ಅಭಿಪ್ರಾಯಪಡಲಾಗಿದೆ. ತಾನು ಯಾವುದೇ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮಗೆ ರಕ್ಷಣೆ ನೀಡಬೇಕೆಂದು ಅರ್ಜಿ ಸಲ್ಲಿಸಿದಾಗ ಅದನ್ನು ಠಾಣಾ ಹೆಚ್.ಸಿ. ಶ್ರೀ ರಾಜ್ ಅವರು ಪಡೆದು ಹಿಂಬರಹ ನೀಡಿರುತ್ತಾರೆ. ದೂರುದಾರರು ಕಂಪೌಂಡ್ ಕಟ್ಟಲು ರಕ್ಷಣೆ ನೀಡಬೇಕೆಂದು ಕೇಳಿಕೊಂಡಿದ್ದು, ಆಗ 1ನೇ ಎದುರುದಾರರಿಗೆ ನೋಟೀಸು ನೀಡಲಾಗಿ ಅವರು ಕಡತ ಅಧ್ಯಯನಕ್ಕೆ ಸ್ವಲ್ಪ ಕಾಲಾವಕಾಶ ಕೋರಿರುತ್ತಾರೆ. 1ನೇ ಎದುರುದಾರರು ನೀಡಿದ ಉತ್ತವನ್ನು ಪರಿಶೀಲಿಸಲಾಗಿ,

ಶಾಲೆಯು ಹಾಗೂ ಹ್ಯಾಂಡ್ ಪಂಪ್ ಬೋರವೆಲ್ ಬಹಳ ವರ್ಷಗಳಿಂದ ಇರುವುದರಿಂದ ಆ ಜಾಗ ಶಾಲೆಗೆ ಸೇರಿರುತ್ತದೆಂದು ಉತ್ತರ ನೀಡಿರುತ್ತಾರೆ. ಆದ್ದರಿಂದ ಇದನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ದೂರುದಾರರಿಗೆ ಅಂಚೆ ಮೂಲಕ ಹಿಂಬರಹ ನೀಡಲಾಗಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

6. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ಈಗಾಗಲೇ ತಮ್ಮ ಆಸ್ತಿ ನಂ.151ರ ಬಗ್ಗೆ ಓ.ಎಸ್.274/1996 ನ್ನು ದಾಖಲಿಸಿ ಅದರಲ್ಲಿ ಡಿಕ್ರಿ ಪಡೆದುಕೊಂಡಿದ್ದು, ಮೇಲ್ಮನವಿ ಸಂಖ್ಯೆ ಆರ್.ಎ.134/2005 ಸಹಾ ವಜಾ ಗೊಂಡಿರುತ್ತದೆ. 1ನೇ ಎದುರುದಾರರು ಪಂಚಾಯತಿಯಲ್ಲಿ ಗೊತ್ತುವಳಿ ಪಾಸು ಮಾಡಿದಾಗ ಅದನ್ನು ಉಚ್ಚ ನ್ಯಾಯಾಲಯವು ರದ್ದುಗೊಳಿಸಿರುತ್ತದೆ.

7. ದೂರುದಾರರು ತಮ್ಮ ಆಸ್ತಿಯ ಬಗ್ಗೆ ಸಂಬಂಧಿಸಿದ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಪರವಾಗಿ ಡಿಕ್ರಿ ಪಡೆದುಕೊಂಡಿದ್ದು, ಪಂಚಾಯತಿಯವರು ಮಾಡಿದ ಗೊತ್ತುವಳಿ ರದ್ದುಗೊಂಡಿರುವುದರಿಂದ ಅವರ ಆಸ್ತಿಯಲ್ಲಿ ಕಂಪೌಂಡ ಕಟ್ಟಲು ಅವರು ಹಕ್ಕುಳ್ಳವರಾಗಿರುತ್ತಾರೆ. ಈ ಎಲ್ಲಾ ನ್ಯಾಯಾಲಯದ ಆದೇಶಗಳು 1ನೇ ಎದುರುದಾರರಿಗೆ ತಿಳಿದಿದ್ದರೂ ಸಹಾ ಪಂಚಾಯತಿ ದಾಖಲೆಗಳ ಪ್ರಕಾರ ಆಸ್ತಿ ನಂ.151ಕ್ಕೆ ದೂರುದಾರರು ಮಾಲೀಕರಲ್ಲವೆಂದು ಅಭಿಪ್ರಾಯಪಟ್ಟು ಅವರಿಗೆ ಕಂಪೌಂಡ್ ಕಟ್ಟದಂತೆ ತಡೆ ಒಡ್ಡಿರುವುದು ಕಾನೂನುಬಾಹಿರವೆನಿಸುತ್ತದೆ.

8. ದೂರುದಾರರು ಕಂಪೌಂಡ್ ಗೋಡೆ ಕಟ್ಟಲು ಹೋದಾಗ 1ನೇ ಎದುರುದಾರರು ಅಡ್ಡಿಪಡಿಸಿದ್ದರಿಂದ 2ನೇ ಎದುರುದಾರರಿಗೆ ದೂರು ಸಲ್ಲಿಸಿ ಸೂಕ್ತ ರಕ್ಷಣೆ ಒದಗಿಸಲು ಕೇಳಿಕೊಂಡಿರುತ್ತಾರೆ. 2ನೇ ಎದುರುದಾರರು ನ್ಯಾಯಾಲಯದ ಆದೇಶಗಳೆಲ್ಲವನ್ನು ನೋಡಿದ್ದು, ಅವರು ದೂರುದಾರರಿಗೆ ರಕ್ಷಣೆ ಒದಗಿಸಬೇಕಾಗಿತ್ತು. ಅದನ್ನು ಬಿಟ್ಟು, ಪುನ: ದೂರುದಾರರಿಗೆ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳಿ ಎಂದು ಹೇಳಿದ್ದು ಸೂಕ್ತವೆನಿಸುವುದಿಲ್ಲ. ದೂರುದಾರರು ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ಡಿಕ್ರಿ ಪಡೆದಿರುವುದರಿಂದ ಪುನ: ಸಿವಿಲ್ ನ್ಯಾಯಾಲಯದಿಂದ ಡಿಕ್ರಿ ಪಡೆಯುವ ಅಗತ್ಯವಿರುವುದಿಲ್ಲ. ಆದ್ದರಿಂದ 1 ಮತ್ತು 2ನೇ

ಎದುರುದಾರರು ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ದೂರುದಾರರಿಗೆ ಅವರ ಆಸ್ತಿಯಲ್ಲಿ ಕಂಪೌಂಡ್ ಕಟ್ಟಲು ಅವಕಾಶ ನೀಡದೆ ಹಾಗೂ ಅವರಿಗೆ ರಕ್ಷಣೆ ನೀಡದೆ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರಿಗೆ ನ್ಯಾಯಾಲಯದ ಆದೇಶದಂತೆ, ಅವರ ಆಸ್ತಿಯಲ್ಲಿ ಕಂಪೌಂಡ್ ಕಟ್ಟಲು ಅವಕಾಶ ನೀಡಲು ಹಾಗೂ ಅವರಿಗೆ ರಕ್ಷಣೆ ನೀಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.